**ಸಿ.ಸಿ.ನಂಃ 173/2025** **ಪ್ರಾಸಾಃ 02**

**ದಿನಾಂಕಃ 19.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-**

ನನಗೂ ಆರೋಪಿಗಳಿಗೂ ಯಾವುದೆ ವಿಶ್ವಾಸ ಮತ್ತು ಸಂಬಂಧ ಇಲ್ಲ ಎಂದರೆ ಸರಿ. ನಾವು ಮರಳು ಹಾಕಿದ್ದ ಜಾಗ ಎರಡನೇ ಆರೋಪಿಯ ಮಾಲೀಕತ್ವಕ್ಕೆ ಒಳಪಟ್ಟಿತ್ತು ಎಂದರೆ ಸರಿಯಲ್ಲ. ನಾನು, ಚಾಸಾ-1 ಮತ್ತು ನನ್ನ ಹೆಂಡತಿ ಘಟನಾ ದಿನ ಹಾಲು ಎರೆಯಲು ಹೋಗುತ್ತಿದ್ದೇವು. ನಾನು ಮತ್ತು ಆರೋಪಿಗಳು ಒಂದೇ ಜನಾಂಗ ಮತ್ತು ಒಂದೇ ಗ್ರಾಮದವರು ಎಂದರೆ ಸರಿ. ದಿಃ 07.12.2024 ರಂದು ಘಟನೆ ನಡೆದಿತ್ತು. ಅಂದು ಸೃಷ್ಟಿ ಹಬ್ಬ ನಡೆಯುತ್ತಿದ್ದು, ಸಾಕಷ್ಟು ಸಾರ್ವಜನಿಕರು ಇರುತ್ತಾರೆ ಎಂದರೆ ಸರಿ. ಘಟನಾ ಸ್ಥಳಕ್ಕೂ ಆಸ್ಪತ್ರೆಗೆ 3 ರಿಂದ 4 ಅಡಿ ಅಂತರ ಇರಬಹುದು. ಆಸ್ಪತ್ರೆಯ ಪಕ್ಕದಲ್ಲಿ ಬಸ್ ನಿಲ್ದಾಣ ಇದೆ ಎಂದರೆ ಸರಿ. ಆಸ್ಪತ್ರೆಯ ಪಕ್ಕದಲ್ಲಿ ಎರಡು ಮತ್ತು ಮೂರನೇ ಆರೋಪಿಗಳ ಮನೆ ಇದೆ ಎಂದರೆ ಸರಿ. ಎರಡನೇ ಆರೋಪಿಯ ಮನೆಯ ಪಕ್ಕದಲ್ಲಿ ಖಾಲಿ ಜಾಗ ಇದೆ. ಅದು ಎರಡನೇ ಆರೋಪಿಗೆ ಸೇರಿದ ಜಾಗ ಎಂದರೆ ಸರಿಯಲ್ಲ. ಸದರಿ ಖಾಲಿ ಜಾಗದಲ್ಲಿ ನಾವು ಮರಳನ್ನು ಸಂಗ್ರಹಿಸಿದ್ದೇವು ಎಂದರೆ ಸರಿ. ನಾನು ಮತ್ತು ಚಾಸಾ-1 ರವರು ತನಿ ಎರೆಯಲು ಹೋಗುತ್ತಿದ್ದಾಗ ನಮ್ಮ ಹಿಂದೆ ಮತ್ತು ಮುಂದೆ ಯಾರು ಇರಲಿಲ್ಲ. ಸದರಿ ಹಬ್ಬದಂದು ಹುತ್ತಕ್ಕೆ ತನಿ ಎರೆಯಲು ಎಂದು ಸಾಕಷ್ಟು ಜನ ನಮ್ಮ ಹಿಂದೆ ಮುಂದೆ ಹೋಗುತ್ತಿದ್ದರು ಎಂದರೆ ಸರಿ. ನಾನು ಅಂದು ಹಳದಿ ಬಣ್ಣದ ಟೀ-ಶರ್ಟ್ ನ್ನು ಧರಿಸಿದ್ದೆ. ಅದನ್ನು ಪೊಲೀಸರಿಗೆ ಕೊಟ್ಟೇವು ಆದರೆ ಅದನ್ನು ತೆಗೆದುಕೊಳ್ಳಲಿಲ್ಲ. ಎರಡನೇ ಆರೋಪಿ ಮು.ಮಾ.1 ರಿಂದ ನನಗೆ ತಂದೆಗೆ ಹಲ್ಲೆ ಮಾಡಿದರು. ಮು.ಮಾ.1 ನಮ್ಮ ಮನೆಯ ಬಳಿ ಇತ್ತು.

ದಿಃ 08.12.2024 ರಂದು ಪೊಲೀಸರು ಮಹಜರ್ ಮಾಡಲು ಬಂದರು. ಈ ಪ್ರಕರಣಕ್ಕೂ ಆರೋಪಿಗಳಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿಗಳು

ನನಗೆ ಮತ್ತು ಚಾಸಾ–1 ರವರ ಜೊತೆ ಜಗಳ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ–1 ರವರ ತಲೆಯ ಜುಟ್ಟನ್ನು ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಿಂದ ಆರೋಪಿಗಳು ನನಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**